ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in and around 10 countries

ಸಂಪುಟ ೫, ಸಂಚಿಕೆ ೧೦, ಮಾರ್ಚ್-೨೦೧೮

ಕನ್ನಡವನ್ನು ಆವಾಹನೆ ಮಾಡಿಕೊಳ್ಳಿ ...



Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೨

ಚಿಲುಮೆಯ ಒಳಗೆ

ಮಂಕುತಿಮ್ಮನ ಕಗ್ಗ ... ಪು. ೫

ಚಿಲುಮೆಯ ಒಳಗೆ

ರಾಂ ರಾಮ ... ಪು. ೬

ಕಥಾಚಿಲುಮೆ, ರೆಸಿಪಿ, ಕಾವ್ಯ ... ಪು. ೮/೯

ಚಿಲುಮೆಯ ಒಳಗೆ

ಪದಪುಂಜ ... ಪು. ೧೧

ಚಿಲುಮೆಯ ಒಳಗೆ

ನೀವು ಮಾಡಿ ... ಪು. ೧೫

ದಾನ ಸಾಹಿತ್ಯ

ಒಂದು ಸಂಶೋಧನೆ

ಪು. ೧೩



ನಾವು ಮಾಡುವ ಕೆಲಸಗಳನ್ನು ನಮ್ಮ ಸುತ್ತಮುತ್ತಲಿನ ಜನರು ನೋಡಿ ಪ್ರಶಂಸಿಸಲಿ, ಆಗಷ್ಟೇ ಸಾರ್ಥಕ್ಯ ಸಿಗುತ್ತದೆ ಎಂದು ಅಪೇಕ್ಷಿಸಿದಾಗ, ಎಲ್ಲವೂ ಆಶಿಸಿದಂತೆ ನಡೆದರೆ, ಆಗ ನಮಗೊಂದಷ್ಟು ನೆಮ್ಮದಿ ಸಿಗುತ್ತದೆ. ಸಂಘಜೀವಿಯಾದ ಮಾನವನಿಗೆ ಇದು ಸಹಜವೆನಿಸಬಹುದು. ಆದರೆ ಬಹುತೇಕ ಸನ್ನಿವೇಶಗಳಲ್ಲಿ, ನಾವು ಅಂದುಕೊಂಡ ಕೆಲಸಗಳು ಈಡೇರದಿದ್ದರೆ ನೊಂದುಕೊಳ್ಳುತ್ತೇವೆ.

ಮನುಜನು ಎಲ್ಲ ಭಾವಗಳನ್ನು ಆಸ್ವಾದಿಸಬೇಕು, ಅದರಲ್ಲಿ ನೋವೂ ಕೂಡ ಒಂದು. ಸದಾ ಸಂತೋಷಭರಿತರಾಗಿ ಇರಲು ಸಾಧ್ಯವಿಲ್ಲ, ಇತ್ಯಾದಿಯಾಗಿ ವಾದಮಂಡಿಸಿ ಸಮರ್ಥಿಸಿಕೊಳ್ಳಬಹುದು. ಆದರೆ ಅದು ಅನುಕೂಲ ಸಿಂಧುತ್ವವಾಗುತ್ತದೆಯೆ ಹೊರತು ಮತ್ತೇನೂ ಆಗಲಾರದು.

ಅದರೆ ಮಾಡುವ ಕೆಲಸಗಳನ್ನು ನಮ್ಮ ಹೃದಯಕ್ಕೆ ಹತ್ತಿರವಾಗಿ ಮಾಡಿದಾಗ, ಮಾನವ ಸಹಜವಾದ ಫಲಾಪೇಕ್ಷೆ ಇದ್ದರೂ, ಭವಿಷ್ಯದ ಫಲದಲ್ಲಿ ಕನಸು ಕಾಣದೆ, ಮಾಡುವ ಕಾಯಕದಿಂದ ಸಂತೋಷವನ್ನು ಅನುಭವಿಸುತ್ತೇವೆ. ಇದನ್ನು ಭಾಷೆಗೂ ವಿಸ್ತರಿಸಿ ಹೇಳುವುದಾದರೆ ಮತ್ತು ಚಿಲುಮೆಯಲ್ಲಿ ಮತ್ತೆ ಮತ್ತೆ ಹೇಳುವಂತೆ, ಕನ್ನಡವನ್ನು ಆರಾಧಿಸಿದರೆ ಮಾತ್ರ ನಾವು ಅದನ್ನು ಅನುಭವಿಸುವುದಕ್ಕೆ ಸಾಧ್ಯ. ನಮ್ಮಲ್ಲಿ ಎಷ್ಟೆಷ್ಟೋ ಆಲೋಚನೆಯಿರುತ್ತದೆ. ಒಂದು ನಾಟಕ ಮಾಡಬೇಕು, ಒಂದು ಕವಿತೆ ಬರೆಯಬೇಕು, ಒಂದು ಅರ್ಥಗರ್ಭಿತ ಕಥೆಯನ್ನು ರಚಿಸಬೇಕು, ನಾಲ್ಕು ಜನರಿಗೆ ಕನ್ನಡವನ್ನು ಕಲಿಸಬೇಕು ಇತ್ಯಾದಿ. ಭಾಷೆಯ ಬಗೆಗಿನ ಇಂತಹ ಮನೋ ಕಾಮನೆಗಳೆಲ್ಲ ಕೇವಲ ಮನೋ ಮಂದಿರದಲ್ಲಿ ಕಲ್ಲು ದೇವರಂತೆ ಕೂತಿದ್ದರೆ, ನಿಯಮಿತದ ಪೂಜೆ ಪುನಸ್ಕಾರಗಳಿಗೆ ದೇವರೀಡಾಗುವಂತೆ ನಮ್ಮ ಭಾಷಾ ಸಂಕಲ್ಪವೆಂಬ ಮೂರ್ತಿಗಳು ಕಲ್ಲಾಗಿಯೇ ಉಳಿಯುತ್ತವೆ. ಅದರ ಬದಲು ನಿಜ ಭಕ್ತರು ದೇವನನ್ನು ಆವಾಹನೆ ಮಾಡಿ ಸಾಕ್ಷಾತ್ಕಾರವನ್ನು ಅನುಭವಿಸುವಂತೆ, ನಮ್ಮ ನಮ್ಮ ಕೈಲಾದ ಮಟ್ಟಿಗೆ ಕನ್ನಡವನ್ನು ಆವಾಹನೆ ಮಾಡಿಕೊಳ್ಳಲೇಬೇಕು.

ಡಾ. ॥ ಜಿ. ಎಸ್ ಶಿವರುದ್ರಪ್ಪನವರ ಈ "ಆವಾಹನೆ" ಪದ್ಯವನ್ನು ಎಷ್ಟು ಬಾರಿ ಓದಿದರೂ, ಪ್ರತೀ ಬಾರಿಯೂ ನಮ್ಮ ನಿಮ್ಮೊಳಗೆ ಹೊಸ ಚಿಗುರೊಂದು ಮೂಡಿ ನಮ್ಮೊಡನೆ ಮಾತನಾಡುತ್ತದೆ. ಅಷ್ಟೊಂದು ಶಕ್ತಿಯುಕ್ತವಾದ ಸಾಲುಗಳನ್ನು ಹೆಣೆದಿದ್ದಾರೆ ಆ ಶ್ರೇಷ್ಠ ಕವಿವರ್ಯರು. ಇದರಿಂದ ಸ್ಫೂರ್ತಿಗೊಂಡು, ನಾವುಗಳೆಲ್ಲ ಕನ್ನಡದ ಹೊಸ ಚಿಗುರುಗಳಾದರೆ, ನವರಸಗೀತೆಗಳಾದರೆ, ಹೊಂಬಣ್ಣದ ಹೊಂಗಿರಣವಾದರೆ ಅದೆಷ್ಟು ಚೆನ್ನವಲ್ಲವೇ. ಆಗ ಕನ್ನಡವು ನಮ್ಮಲ್ಲಿ, ನಮ್ಮ ಸುತ್ತಮುತ್ತಲಲ್ಲಿ ಲಾಸ್ಯವಾಡದಿರುತ್ತದೆಯೇ. ಬನ್ನಿ ಕನ್ನಡವನ್ನು ಆವಾಹನೆ ಮಾಡಿಕೊಳ್ಳೋಣ.! ▪

ಎಲ್ಲೋ ದೂರದಿ ಜಿನುಗುವ ಹನಿಗಳೆ
ಬನ್ನಿ ಬನ್ನಿ ಬಿರುಮಳೆಯಾಗಿ,
ತುಂಬಲಿ ತುಳುಕಲಿ ಬತ್ತಿದ ಹೊಳೆ ಕೆರೆ
ಹೊಸ ಹಸುರೇಳಲಿ ನವುರಾಗಿ!

ಎಲ್ಲೋ ದೂರದಿ ಜಿನುಗುವ ದನಿಗಳೆ
ಬನ್ನಿ ಬನ್ನಿ ರಸಗೀತೆಗಳಾಗಿ
ಮೌನದಿ ಮಲಗಿದ ವಾದ್ಯವೃಂದಗಳ
ಮೇಲಾಡಿರಿ ಚೆಲು ಬೆರಳಾಗಿ

ಎಲ್ಲೋ ದೂರದಿ ಮಿನುಗುವ ಕಿಡಿಗಳೆ
ಬನ್ನಿ ಬನ್ನಿ ಹೊಂಗಿರಣಗಳಾಗಿ
ಹಣತೆ ಹಣತೆಗಳ ತುಟಿಯೊಳು ಕುಡಿನಗೆ
ಮಿಂಚಿಸಿ ಒಳ ಹೊರಗನು ಬೆಳಗಿ

ಎಲ್ಲೋ ದೂರದಿ ಚಿಕ್ಕೆಗೆಜ್ಜೆಗಳ
ಕಟ್ಟಿ ನರ್ತಿಸುವ ಹೆಜ್ಜೆಗಳೇ
ಬನ್ನಿ ನನ್ನೆಡೆಗೆ ಲಾಸ್ಯವನಾಡಿರಿ
ಚಿಮ್ಮಲಿ ನಲವಿನ ಬುಗ್ಗೆಗಳೇ

ಅನಿವಾಸಿ ತಂಡ ಸಿಡ್ನಿಯ ಕನ್ನಡ ನಾಟಕ, ಸಿನಿಮಾ,ಸಂಗೀತ ಹಾಗೂ ಸಾಹಿತ್ಯದ ಚಟುವಟಿಕೆಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದೆ. ಹೊಸ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕನ್ನಡದ ವಾತಾವರಣದಲ್ಲಿ ಲವಲವಿಕೆ ಮೂಡಿಸಿದೆ.

ಅಂತಹ ಒಂದು ಹೊಸ ಪ್ರಯೋಗ 'ಕುರಿತೋದುವ ಹೊತ್ತು'. ಲೇಖಕರ ಸಮಕ್ಷಮದಲ್ಲಿ ಅವರ ಕೃತಿಗಳನ್ನು ಓದಿ, ಚರ್ಚಿಸಿ ವಿಚಾರ ವಿನಿಮಯ ಮಾಡುವ ಒಂದು ವಿಶೇಷ ಅವಕಾಶ.ಇದರ ಮೊದಲ ಕಂತಿನಲ್ಲಿ ಸಿಡ್ನಿಯ ಸ್ಥಳೀಯ ಲೇಖಕರ ಹಾಗೂ ಅಬ್ದುಲ್ ರಶೀದರ ಕೃತಿಗಳನ್ನು ಪರಿಚಯಿಸಲಾಗಿತ್ತು.

'ಶನಿವಾರ ಮಾರ್ಚ್ ೧೦ ನೇ ತಾರೀಕು ಇದೇ ಅಂಕಣದ ಎರಡನೇ ಕಂತಿನಲ್ಲಿ ಕನ್ನಡದ ಖ್ಯಾತ ಲೇಖಕ ಶ್ರೀ ವಿವೇಕ್ ಶಾನಬಾಗ್ ಅವರ ಕಥೆಗಳನ್ನು 'ಕುರಿತೋದುವ ಹೊತ್ತನ್ನು' ಏರ್ಪಡಿಸಿತು ಅನಿವಾಸಿ ತಂಡ.

ಅಡಿಲೈಡ್ ರೈಟರ್ಸ್ ಉತ್ಸವಕ್ಕೆ ಅತಿಥಿಯಾಗಿ ಬಂದಿದ್ದ ಶ್ರೀಶಾನಬಾಗ್ ಅವರು ಕಾರ್ಯಕ್ರಮದಲ್ಲಿ ಉತ್ಸಾಹದಿಂದ ಭಾಗವಹಿಸಿ ತಮ್ಮ ಬರವಣಿಗೆ, ಅಂದಿನ ಮುಂಬೈ ಒದಗಿಸಿದ ಸ್ವತಂತ್ರ ಚಿಂತನೆ ಹಾಗೂ ಸಾಹಿತ್ಯಕ ವಾತಾವರಣದ ಬಗ್ಗೆ,ತಮ್ಮ ಸಾಹಿತ್ಯ ಕೃಷಿಯ ಬಗ್ಗೆ ಮಾತನಾಡಿದರು. ತಮ್ಮ ಬರವಣಿಗೆಗೆ ಖ್ಯಾತ ಲೇಖಕ ಯಶವಂತ ಚಿತ್ತಾಲರ ಪ್ರೋತ್ಸಾಹವನ್ನು ನೆನೆಸಿಕೊಂಡರು.

ಶಾನಬಾಗ್ ಅವರ ಪ್ರಸಿದ್ಧ ಗಾಚರ್-ಗೋಚರ್ ಕಾದಂಬರಿಯನ್ನು ಶ್ರೀನಾಥ್ ಪೇರೂರ್ ಇಂಗ್ಲಿಷ್ಗೆ ಅನುವಾದಿಸಿದ್ದಾರೆ. ಆ ಅನುವಾದದಿಂದ ಒಂದು ಮಾರ್ಮಿಕ ಭಾಗವನ್ನು ಸುಧಾಕರ್ ರಾವ್ ಭಾವಪೂರ್ಣವಾಗಿ ಓದಿದರು.ಪ್ರತೀಕ್ ಮುಕುಂದ ಅವರು ಶಾನಬಾಗ್ ಅವರ ಕೃತಿಯನ್ನು ಪ್ರಸ್ತುತ ಪಡಿಸಿದರು.

ವೀಣಾ ಸುದರ್ಶನ್ ಅವರ ನಿರ್ದೇಶನದಲ್ಲಿ ಶಾನಬಾಗ್ ಅವರ ನಾಟಕ 'ಬಹುಮುಖಿ'ಯ ಕೆಲವು ದೃಶ್ಯಗಳನ್ನು ನಾಗಶಯನ, ಮಹೇಶ್ ಸಿಂಗ್ ಹಾಗೂ ವೀಣಾ ಅಭಿನಯಿಸಿದರು.

ಇದೇ ವೇದಿಕೆಯಲ್ಲಿ ಕನ್ನಡದ ಹೆಸರಾಂತ ಕವಿ ಶ್ರೀ ಗೋಪಾಲಕೃಷ್ಣ ಅಡಿಗರ ಜನ್ಮಶತಾಬ್ದಿಯ ಆಚರಣೆಯೂ ಸೇರಿತ್ತು.

ಅನಿವಾಸಿ ತಂಡದ ಗಾಯಕರು ಅಡಿಗರ ಕೆಲವು ಆಯ್ದ ಕವನಗಳನ್ನುಮನಮುಟ್ಟುವಂತೆ ಹಾಡಿದರು.ಸುದರ್ಶನ್ ಅವರ ಸಮರ್ಪಕ ರಾಗ ಸಂಯೋಜನೆ ಅವರ ಬಹುಮುಖ ಪ್ರತಿಭೆಗೆ ಸಾಕ್ಷಿಯಾಗಿತ್ತು.

ಜಾನಪದ ಶೈಲಿಯ ಪ್ರಾರ್ಥನೆಯೊಂದಿಗೆ ಶುರುವಾದ ಈ ಕಾರ್ಯಕ್ರಮವನ್ನು ರೇಖಾ ಶಶಿಕಾಂತ್ ನಿರೂಪಿಸಿದರು. ಕನ್ನಡ ಶಾಲೆಯ ಸಹಕಾರದೊಡನೆ ನಡೆದ ಈ ಕಾರ್ಯಕ್ರಮಕ್ಕೆ ಸಿಡ್ನಿಯ ಬಿಡುವಿಲ್ಲದ ವಾರಾಂತ್ಯದಲ್ಲೂ ಸಾಹಿತ್ಯಪ್ರೇಮಿಗಳು ಬಂದಿದ್ದರು, ಬಾರದಿದ್ದವರು ಒಂದು ಸದವಕಾಶವನ್ನು ಕಳೆದುಕೊಂಡರು!▪

ಸಿಡ್ನಿ ಕನ್ನಡ ಶಾಲೆ

ಆಚರಿಸುತ್ತಿದೆ

ಯುಗಾದಿ ಹಬ್ಬ 2018

07-04-2018 5:30 for 6pm start

ಪದ್ಮಶ್ರೀ
ಡಾ ಬಿ ಜಯಶ್ರೀ
ಅವರ ಸನ್ಮಾನ

ಸ್ಥಳೀಯ ಉದಯೋನ್ಮುಖ ಗಾಯಕರಿಂದ

ಭಾವಗೀತೆ, ಜನಪದಗೀತೆ ಮತ್ತು ಚಲನಚಿತ್ರಗೀತೆ
ಹಾಗೂ
ವಯೊಲಿನ್ Special attraction

ಅನಿವಾಸಿ ಕಲಾ ತಂಡದವರಿಂದ
"ಅಡಿಗರ ನೆನಪು"

Venue
Wattlegrove public School,
Cressbrook Drive,
Wattlegrove NSW 2173

Entry $30/family (includes dinner)

Please book for catering purpose
Narayana 0423 634 979
Nagabhushan 0433 763 911
Deepak 0413 607 311
Or email
sugamakannada@gmail.com

Your support to raise funds to our Kannada school most appreciated



ನದಿಯ ತೆರೆಯವೊಲುರುಳಿ ಹೊರಳುತಿರುವುದು ಜೀವ |
ಮೊದಲಿಲ್ಲ ಮುಗಿವಿಲ್ಲ ನಿಲುವಿಲ್ಲವದಕೆ ||
ಬದುಕೇನು ಸಾವೇನು ಸೊದೆಯೇನು ವಿಷವೇನು? |
ಉದಕಬುದ್ಬುದವೆಲ್ಲ!-ಮಂಕುತಿಮ್ಮ ||

ತೆರೆಯವೊಲುರುಳಿ=ತೆರೆಯವೊಲು+ಉರುಳಿ, ಉದಕಬುದ್ಬುದವೆಲ್ಲ=ಉದಕ+ಬುದ್ಬುದವು+ಎಲ್ಲ,
ತೆರೆಯವೊಲು=ನದಿಯ ಅಲೆಯಂತೆ, ಮುಗಿವಿಲ್ಲ=ಕೊನೆಯಿಲ್ಲ, ನಿಲುವಿಲ್ಲ=ನಿಲುವು ಅಂದರೆ ಸ್ಥಿರತೆ,.
ಸೊದೆಯೇನು=ಅಮೃತವೇನು, ಉದಕ=ನೀರು, ಬುದ್ಬುದ=ಗುಳ್ಳೆ.

ವಾಚಕರೆ ಹಿಂದಿನ ಮುಕ್ತಕದಲ್ಲಿ ಈ ಹಳತು ಹೊಸತನದ ತಿಕ್ಕಾಟವನ್ನು ಅಮೃತಕ್ಕಾಗಿ ನಡೆಯುವ ಸಮುದ್ರ ಮಂಥನಕ್ಕೆ ಹೋಲಿಸಿದರು ಮಾನ್ಯ ಡಿ.ವಿ.ಜಿ. ಯವರು. ಆದರೆ ಈ ಮುಕ್ತಕದಲ್ಲಿ ಒಂದು ವೇದಾಂತದ ಮಾತನ್ನು ಸೂಚಿಸಿದ್ದಾರೆ. ಇಡೀ ಜೀವನವನ್ನು ಅವರು ಒಂದು ನದಿಯ ತೆರೆ ಅಥವಾ ಅಲೆಯಂತೆ ಎಂದಿದ್ದಾರೆ. ಒಂದು ನಿಮಿಷವೂ ಒಂದೇ ತೆರನಾಗಿ ಇರದ ನದಿಯ ತೆರೆಗೆ ಹೋಲಿಸಿದ್ದಾರೆ.

ಹೌದು ಯಾರ ಜೀವನವೂ ಎಂದೂ ಒಂದೇ ತೆರನಾಗಿ ಇರುವುದಿಲ್ಲ. ಬದಲಾವಣೆಯಾಗುತ್ತಲೇ ಇರುತ್ತದೆ. ಅದಕ್ಕೆ ನಾನು ಅದನ್ನು ಕೆಲಿಡೋಸ್ಕೊಪ್ ಲೈಫ್ ಎಂದು ಕರೆಯುತ್ತೇನೆ. ಕೆಲಿಡೋಸ್ಕೊಪ್ ಎನ್ನುವುದು ನಾವು ಚಿಕ್ಕಂದಿನಲ್ಲಿ ಮೂರು ಬಿಳಿಯ ಗಾಜಿನ ಪಟ್ಟಿಗಳನ್ನು ತೆಗೆದುಕೊಂಡು ಮೂರನ್ನೂ ತ್ರಿಕೋನಾಕಾರದಲ್ಲಿ ಜೋಡಿಸಿ ಎಲ್ಲ ಬದಿಯಿಂದಲೂ ಬಂಧಿಸಿ ಒಂದು ಕೊನೆಯನ್ನು ಮುಚ್ಚಿ ಸುತ್ತಲೂ ಕಾಗದವನ್ನು ಸುತ್ತಿ ಬಿಡುತ್ತಿದ್ದೆವು. ತೆರೆದ ಬದಿಯಿಂದ ಒಡೆದ ಗಾಜಿನ ಬಳೆಯ ಚೂರುಗಳನ್ನು ಹಾಕಿದರೆ ಒಂದು ಚಿತ್ತಾರ (ಡಿಸೈನ್) ಮೂಡುತ್ತಿತ್ತು. ಅದನ್ನು ತಿರುಗಿಸುತ್ತಾ ಹೋದಂತೆಲ್ಲ, ಬೇರೆಬೇರೆ ಚಿತ್ತಾರಗಳು ಮೂಡುತ್ತಿದ್ದವು. ಒಂದು ಬಾರಿ ಮೂಡಿದ ಚಿತ್ತಾರ ಮತ್ತೊಂದು ಬಾರಿಗೆ ಎಂದೂ ಬರುವುದಿಲ್ಲ. ಹಾಗೆಯೇ ನಮ್ಮ ಜೀವನಗಳು ಈಗ ಇದ್ದಂತೆ ಎಲ್ಲವೂ ಮತ್ತೆಂದಿಗೂ ಇರುವುದಿಲ್ಲ. ದಿನಕಳೆದಂತೆ ನಮ್ಮ ವಯಸ್ಸು ಒಂದು ದಿನ ಹೆಚ್ಚಾಗುತ್ತದೆ. ಒಂದು ದಿನ ಇದ್ದ ಮನೋಭಾವ ಮತ್ತೊಂದು ದಿನ ಇರುವುದಿಲ್ಲ, ಒಂದು ಗಳಿಗೆ ಇದ್ದ ನಮ್ಮ ಯೋಚನಾ ವಿಧ ಮತ್ತೊಂದು ಗಳಿಗೆ ಇರುವುದಿಲ್ಲ. ಇದನ್ನೇ ಮಾನ್ಯ ಗುಂಡಪ್ಪನವರು "ನಿಲುವಿಲ್ಲ" ಎಂದರು.

ಇನ್ನು ನಾವು ಈಗ ಮನುಷ್ಯರಾಗಿ ಹುಟ್ಟಿದ್ದೇವೆ, ಹಿಂದೆ ಏನಾಗಿದ್ದೆವೋ ಮುಂದೆ ಏನಾಗುತ್ತೇವೆಯೋ ಗೊತ್ತಿಲ್ಲ. ಇದಕ್ಕೇ, ಮೊದಲಿಲ್ಲ ಕೊನೆಯಿಲ್ಲ ಎನ್ನುತ್ತಾರೆ ಶ್ರೀ ಗುಂಡಪ್ಪನವರು. ವೇದಾಂತದ ಪ್ರಕಾರ ಒಂದು ಜೀವಿ ಮಾನವನಾಗಿ ಹುಟ್ಟಬೇಕಾದರೆ ಅದಕ್ಕೆ ಮೊದಲು 84 ಲಕ್ಷ ಬಾರಿ (ಏಸು ಕಾಯಂಗಳ ಕಳೆದು 84 ಲಕ್ಷ ಜೀವರಾಶಿಯನ್ನು ದಾಟಿ ಬಂದ ಈ ಶರೀರ ಎಂಬುದು ದಾಸರ ಪದ.) ಬೇರೆ ಬೇರೆ ದೇಹಗಳನ್ನು ಹೊಕ್ಕು ಹೊರಗೆ ಬಂದು ಮನುಷ್ಯನಾಗುತ್ತಾನೆ. ಇನ್ನೂ ಕೆಲವರು ಜೀವಿ ತಾನು ಏನಾಗಬೇಕು, ಎಲ್ಲಿಗೆ ಹೋಗಬೇಕು ಎನ್ನುವುದನ್ನು ತಾನೇ ನಿರ್ಧರಿಸುತ್ತಾನೆ ಎನ್ನುತ್ತಾರೆ. ಆ ನಿರ್ಧಾರಗಳು ನಮ್ಮ ಮನಸ್ಸು ಬುದ್ಧಿಗಳಿಗೆ ಗೊತ್ತಾಗುತ್ತವೆಯೋ ಇಲ್ಲವೋ, ಎಲ್ಲವೂ ಅನಿಶ್ಚಯ. ಇದಕ್ಕೆ ಇರುವ ಆದಿಯೂ ಗೊತ್ತಿಲ್ಲ ಅಂತ್ಯವೂ ಗೊತ್ತಿಲ್ಲ. ಇದನ್ನೇ ಗುಂಡಪ್ಪನವರು ‘‘ಮೊದಲಿಲ್ಲ ಮುಗಿವಿಲ್ಲ ನಿಲುವಿಲ್ಲವದಕೆ’’ ಎಂದರು.

ಬದುಕಿನ ಅರ್ಥ ಗೊತ್ತಿಲ್ಲ, ಅಥವಾ ನಮಗೆ ಗೊತ್ತಿರುವುದು ನಮ್ಮ ದೃಷ್ಟಿಕೋನವಷ್ಟೇ, ಸಮಗ್ರ ಸತ್ಯವಲ್ಲವಲ್ಲ. ಸಾವೆಂದರೆ ನಮಗೆ ಗೊತ್ತಿರುವುದು, ಒಂದು ವ್ಯಕ್ತಿ ಮೂರ್ತರೂಪದಲ್ಲಿ ಶರೀರದಿಂದ ಇರಲಾಗದ ಸ್ಥಿತಿಯೇ ಸಾವು. ಬದುಕೇ ನಿರ್ದಿಷ್ಟವಲ್ಲ. ಇನ್ನು ಬದುಕಿಗೆ ಸಂಬಂಧಿಸಿದ ಸುಖವೇನು? ಅಮೃತ ಅಂದರೆ ಸವಿ. ಆ ಸವಿಯನ್ನೇ ಸುಖ ಎಂದುಕೊಳ್ಳಬೇಕು. ವಿಷ (ದುಃಖ) ವೇನು? ಅದೂ ಅರ್ಥವಾಗುವುದಿಲ್ಲ. ಬದುಕೆಲ್ಲ ಒಂದು ಉದಕಬುದ್ಬುದ, ಅಂದರೆ ನೀರಿನ ಮೇಲಿನ ಗುಳ್ಳೆ ಎಂದು ಹೇಳುತ್ತಾರೆ ಗುಂಡಪ್ಪನವರು. ‘‘ನೀರ ಮೇಲಣ ಗುಳ್ಳೆ ನಿಜವಲ್ಲ ಹರಿಯೇ’’ ಎಂದು ಪುರಂದರ ದಾಸರು ತಿಳಿಸುತ್ತಾರೆ. ಯಾವುದೂ ನಿರಂತರವಲ್ಲ, ನಿಶ್ಚಯವಿಲ್ಲ, ನಿಶ್ಚಯವಿದ್ದರೂ ನಮಗೆ ಅದರ ಅರಿವಿಲ್ಲ. ಅಂತಹ ಭಾವಗಳನ್ನೇ ವ್ಯಕ್ತಪಡಿಸುತ್ತಾರೆ ಶ್ರೀ ಗುಂಡಪ್ಪನವರು.

ಆದರೆ ನಾವು ‘‘ಅಯ್ಯೋ ಜೀವನವೆಲ್ಲ ನಶ್ವರ, ಯಾವುದೂ ಶಾಶ್ವತವಲ್ಲ ನಾನೇಕೆ ಏನಾದರೂ ಮಾಡಬೇಕು’’ ಎಂದು ನಿರಾಸೆಯ ಭಾವ ತಳೆಯಬಾರದು. ಅದು ಬದುಕಿಗೆ ಮಾರಕ. ಬದುಕಿಗೆ ಪೂರಕವಾದ ಸದಾಶಾಭಾವವನ್ನೇ ಇಟ್ಟುಕೊಂಡು ಜೀವನವನ್ನು ಸಾಗಿಸಬೇಕು. ನಮ್ಮ ಪ್ರಮೇಯವಿದ್ದಂತೆ ಕಂಡರೂ ಇಲ್ಲದ ಮತ್ತು ಅದಕ್ಕೆ ತದ್ವಿರುದ್ಧವಾದ ಅನುಭವಗಳು ನಮಗೆ ಆಗುತ್ತವೆ. ಹಾಗಾಗಿ ನಾವು ಆ ಪರಮ ಶಕ್ತಿಯ ಅಧೀನದಲ್ಲಿರುವುದರಿಂದ ಅದಕ್ಕೆ ಡಿ.ವಿ.ಜಿ.ಯವರು ಹೇಳುವಂತೆ ‘‘ಆ ವಿಚಿತ್ರಕೆ ಶರಣಾಗೋ’’ ಎಂಬಂತೆ ಇರಬೇಕು.

ಆದರೆ ಜೀವನದಲ್ಲಿ ಇರುವಾಗ ಯಾವುದಕ್ಕೂ ಅಂಟದೆ ತಾವರೆ ಎಲೆಯ ಮೇಲಿನ ನೀರ ಹನಿಯಂತೆ ಇರಬೇಕು. ಇದ್ದರೆ ನೆಮ್ಮದಿ, ಸುಖ ಮತ್ತು ಆನಂದ. ಹೇಳುವುದು ಸುಲಭ ಆಚರಣೆ ಬಹಳ ಕಷ್ಟ. ಆದರೆ ಅಸಾಧ್ಯವಲ್ಲವಲ್ಲ!!!. ಪ್ರಯತ್ನಪಡೋಣ. ಎಂದೋ ಒಂದು ದಿನ ನಮಗೂ ಆ ಆನಂದದ ನೆಲೆ ಸಿಗಬಹುದು. ▪

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಟ್ರಾಫಿಕ್ ಸಮಸ್ಯೆಗೊಂದು ಟೆರಿಫಿಕ್ ಐಡಿಯ

ತಿಪ್ಪೆನಗರದ ಕುಪ್ಪೆ ಬಡಾವಣೆಯ ರಾಡಿ ರಸ್ತೆಯ ಕೆಸರುಭವನದಲ್ಲಿ ಸಭೆ ಸೇರಿತ್ತು.

"ನಗರದಲ್ಲಿ ಟ್ರಾಫಿಕ್ ಸಮಸ್ಯೆ ಬಹಳ ಹೆಚ್ಚಿದೆ. ಇದಕ್ಕೊಂದು ಪರಿಹಾರ ಸೂಚಿಸಿರಿ" ಕೇಳಿದರು ಅದಕ್ಷ ರುದ್ರಮುನಿ.

"ನಗರದ ರಸ್ತೆಗಳಲ್ಲಿರುವ ಎಲ್ಲ ಪಾಟ್‌ಹೋಲ್‌ಗಳ ಜೋಡಣೆ ಹಮ್ಮಿಕೊಂಡು ಹಳ್ಳಗಳಲ್ಲಿ ನೀರು ತುಂಬಿ ದೋಣಿ ಸಾರಿಗೆ ಸೇವೆ ಆರಂಭಿಸಿ" ಸಜೆಸ್ಟಿಸಿದ ಮುಗುದಂ.

"ಅಷ್ಟು ನೀರನ್ನು ಎಲ್ಲಿಂದ ತರುವುದು?"

"ಸೀರಿಯಲ್ ನೋಡುವವರ ಕಣ್ಣುಗಳಿಗೆ ಪೈಪ್ ಅಳವಡಿಸಿ. ಚುನಾವಣಾ ಸಮಯದಲ್ಲಿ ಪ್ರತಿ ಮುಖಂಡನ ಕಣ್ಣೂ ವರುಣಾ ನಾಲೆಯಷ್ಟು ನೀರನ್ನು ಸ್ಟಾಕ್ ಇಟ್ಟುಕೊಂಡಿರುತ್ತಾದ್ದರಿಂದ ಅದನ್ನೂ ಬಳಸಬಹುದು."

"ಗುಡ್ ಐಡಿಯ. ಆದರೆ ಸಾಧ್ಯವಾಗುವುದಿಲ್ಲ. ರಾಮೋತ್ಸವ, ಗಣೇಶ ಸೀಸನ್‌ನಲ್ಲಿ ಹಳ್ಳದಲ್ಲೂ ಚಪ್ಪರ ಹಾಕುವುದರಿಂದ ಬೋಟ್-ಕಂಬ ಆಕ್ಸಿಡೆಂಟ್ ಆಗುವ ಸಂಭವವಿರುತ್ತದೆ" ಮೊದಲ ಸಲಹೆ ತಿರಸ್ಕಾರದ ಹಳ್ಳಕ್ಕೆ ಇಳಿಯಿತು.

"ರೈತನೊಬ್ಬ ಸನ್ನಿ ಲಿಯೋನ್‌ಳ ಪೋಸ್ಟರ್ ಹಾಕಿದ್ದರಿಂದ ಜನರ ಗಮನ ಬೆಳೆಯ ಮೇಲೆ ಬೀಳುವುದು ಕಡಿಯೆಮಾದ ಕಾರಣ ಬೆಳೆ ಹಾರಿಸಿಕೊಂಡು ಹೋಗುವವರ ಸಂಖ್ಯೆ ತಗ್ಗಿ ಇಳುವರಿ ಹೆಚ್ಚಾಯಿತಂತೆ. ಹಾಗೆಯೇ ಗಲ್ಲಿಗಲ್ಲಿಗಳಲ್ಲಿ, ಅಡ್ಡರಸ್ತೆಗಳಲ್ಲಿ ಶ್ರೀದೇವಿ, ಸನ್ನಿ ಲಿಯೋನ್, ಮಲ್ಲಿಕಾ ಶೆರಾವತ್, ಮುಂತಾದವರ ಆಕರ್ಷಕ ಕಟೌಟ್‌ಗಳನ್ನು ಹಾಕಿದರೆ ಮೇಯ್ನ್ ರೋಡ್ ಟ್ರಾಫಿಕ್ ತಗ್ಗಿಸಬಹುದು" ಎಂದ ಚಿತ್ರಪ್ರೇಮಿ ರೂಪೇಂದ್ರ.

"ಬೇರೆ ಸಮಯದಲ್ಲಿ ಇದನ್ನು ಮಾಡಬಹುದಿತ್ತೇನೋ, ಈಗ ಆಗದು" ಎಂದರು ಅದಕ್ಷರು.

"ಏಕೆ?"

"ಕಟೌಟನ್ನು ಹಸ್ತಿನಿ ಪಕ್ಷ ಹಾಕಿದರೆ ಕಮಲಿನಿ, ಕಮಲಿನಿ ಹಾಕಿದರೆ ಹಸ್ತಿನಿ ಹರಿದುಬಿಸಾಡುವ ಸಾಧ್ಯತೆ ಇರುತ್ತದೆ. ಚುನಾವಣಾ ಸಮಯದಲ್ಲಿ ನಮ್ಮ ಎರಡೂ ಕಣ್ಣು ಹೋದರೂ ಸರಿಯೆ, ಎದುರು ಪಕ್ಷದ ಒಂದು ರೆಪ್ಪೆಯಾದರೂ ಹೋಗಬೇಕು ಎಂಬ ಧೋರಣೆ ಸಾಮಾನ್ಯ. ಅಲ್ಲದೆ ಇನ್ನೊಂದು ಸಾಧ್ಯತೆಯನ್ನೂ ಅಲ್ಲಗಳೆಯಲಾಗದು"

"ಯಾವುದು?"

"ಆ ನಟಿಯರ ಕಟ್ಟಾ ಅಭಿಮಾನಿಗಳು ರಾತ್ರೋರಾತ್ರಿ ಕಟೌಟ್‌ಗಳನ್ನು ಕದ್ದೊಯ್ಯಬಹುದು. ಅಥವಾ ಗುಡಿಸಲಿನ ಮಂದಿ ಕಟೌಟುಗಳನ್ನೇ ಗೋಡೆಯಾಗಿಸಿಕೊಳ್ಳಲು ಪೀಸ್ ಪೀಸ್ ಮಾಡಿಯೂ ಒಯ್ಯಬಹುದು"

"ಕಟೌಟ್‌ಗಳನ್ನು ನಿಲ್ಲಿಸುವ ಬದಲು ಆಕಾಶದಲ್ಲೇ ಹಾರುವಂತಹ ಬೆಲೂನ್‌ಗಳಲ್ಲಿ ಅವರ ಆಕಾರಗಳನ್ನು ಮೂಡಿಸಿದರೆ?" ಸಲಹಿಸಿದ ಸ್ಕೈವಾಕ್ ಸಿದ್ದಪ್ಪ

"ರ್‍ರೀ... ರಸ್ತೆ ನೋಡ್ಕೊಂಡ್ಹೋಗೇ ಇಷ್ಟೆಲ್ಲ ಆಕ್ಸಿಡೆಂಟ್ ಆಕಾಶ ನೋಡ್ಕೊಂಡ್ಹೋದ್ರೆ ಅಷ್ಟೇ ಗತಿ. ಅಲ್ಲದೆ ಇನ್ನೊಂದು ಕಷ್ಟವೂ ಇದೆ"

"ಏನು?"



"ಗಾಳಿ ರಭಸವಾಗಿ ಬೀಸಿದರೆ ಬೆಲೂನ್ ಆಕೃತಿಗಳು ಚಲಿಸಿ ಯಾವುದಾದರೂ ಅಪಾರ್ಟ್‌ಮೆಂಟ್ ಕಿಟಕಿ ತಲುಪಿದರೆ ಅದರ ಪ್ರಯಾಣ ಅಂತ್ಯವಾದಂತೆಯೇ. ಅಲ್ಲಿನವರು ಅದಕ್ಕೆ ಇನ್‌ಸ್ಟೆಂಟ್ ವಾರಸುದಾರರಾಗಿಬಿಡುತ್ತಾರೆ" ವಿವರಿಸಿದರು ಅದಕ್ಷರು.

"ದೆಹಲಿಯಂತೆ ಸರಿ-ಬೆಸ ಸಂಖ್ಯೆ ಆಚರಿಸಿದರೆ?" ಸಂಖ್ಯಾಶಾಸ್ತ್ರಿಯೊಬ್ಬ ಕೇಳಿದ.

"ಆಗದು. ಟಿವಿ ಜ್ಯೋತಿಷಿಗಳು ನಮ್ಮ ಲೆಕ್ಕವನ್ನೇ ಗಬ್ಬೆಬ್ಬಿಸಿಬಿಟ್ಟಿದ್ದಾರೆ. 16ನ್ನು 7 ಎಂದು ಓದಲು ಹೇಳಿಕೊಟ್ಟಿರುವುದರಿಂದ ಭವಿಷ್ಯ ನಂಬುವ ಮಂದಿ ಬೆಸವನ್ನು ಸರಿಯೆಂದೂ, ಸರಿಯೆಂದು ಬೆಸವೆಂದೂ ವಾದಿಸತೊಡಗುತ್ತಾರೆ. ಮೊದಲೇ ಟ್ರಾಫಿಕ್ ಹೆಚ್ಚಿರುವಾಗ ಜಗಳಕ್ಕೆಂದು ಜನ ನಿಂತರೆ ರಸ್ತಾ ರೋಕೋ ಮಟ್ಟಕ್ಕೆ ಸಂದಣಿ ಮೂಡಿಬಿಡುತ್ತದೆ" ಅದಕ್ಷ ಉವಾಚ.

"ನನ್ನದೊಂದು ಐಡಿಯ ಇದೆ. ಒಂದಷ್ಟು ಸ್ಟೂಟ್ಸು, ಕಾರುಗಳನ್ನ ಸುಮ್ಮನೆ ಸುಟ್ಬಿಡೋಣ. ಜನ ಕಾರ್ ಹೊರತರಕ್ಕೆ ಹೆದರಿ ಪಬ್ಲಿಕ್ ಟ್ರಾನ್ಸ್‌ಪೋರ್ಟ್ ಬಳಸ್ತಾರೆ" ರೌಡಿ ಭದ್ರಣ್ಣ ನುಡಿದ.

ಮುಂದಿನ ಪುಟ ನೋಡಿ ...

“ಊಹೂಂ. ಸುಡೋ ವೆಹಿಕಲ್ ನೋಡ್ತಾ ನಿಲ್ಲೋ ಜನರ ಗುಂಪು, ವಯ್ಯೋ ಅಂತ ಬರೋ ಫೈರ್ ಇಂಜೆನ್‌ಗೋಸ್ಕರ ಟ್ರಾಫಿಕ್ ಕಂಟ್ರೋಲು, ‘ಸುಟ್ಟ ಜಾಗ ವೀಕ್ಷಣೆಗೆ ಸಚಿವರ ಸವಾರಿ’ ಕಾರಣದಿಂದ ಗಂಟೆಗಟ್ಟಲೆ ಟ್ರಾಫಿಕ್ ನಿಲ್ಲಿಸೋದ್ರಿಂದ ಇದ್ದಿದ್ದೂ ಕಷ್ಟವಾಗತ್ತೆ. ಕಾರ್ ಸುಡಕ್ಕೋಗಿ ಜನ ಕೆಂಡ ಕಾರೋ ತರಹ ಮಾಡೋ ಐಡಿಯಾ ಭದ್ರವಲ್ಲ ಭದ್ರಣ್ಣ”

“ಪ್ರತಿ ಜಂಕ್ಷನ್‌ನಲ್ಲೂ ಸಿಗ್ನಲ್ ಲೈಟ್ ಹಾಕಿಸಿರಿ” ಟ್ಯೂಬ್ಲೈಟಣ್ಣ ನುಡಿದ.

“ಹ್ಹ! ತಿಪ್ಪೆನಗರದ ಜನ ಕಲರ್ ಬ್ಲೈಂಡ್. ಅವರಿಗೆ ಹಸಿರು, ಕಿತ್ತಳೆ, ಕೆಂಪುಗಳ ವ್ಯತ್ಯಾಸ ತಿಳಿಯುವುದಿಲ್ಲವಾದ್ದರಿಂದ ಕೆಂಪಿದ್ದಾಗಲೂ ಭರ್ರನೆ ಹೋಗುತ್ತಾರೆ”

“ಮೇಲಿನದು ಕೆಂಪು, ಕೆಳಗಿನದು ಹಸಿರೆಂದೂ ತಿಳಿಯದೆ?”

“ಟ್ರಾಫಿಕ್ ಲೈಟ್ ವಿಷಯದಲ್ಲಿ ಮಾತ್ರ ಅವರು ಮೇಲು-ಕೀಳೆಂಬ ತಾರತಮ್ಯ ಮಾಡುವುದಿಲ್ಲ. ಯಾವುದೇ ಹೊತ್ತಿಕೊಂಡರೂ ಮುಂದಕ್ಕೆ ಚಲಿಸುತ್ತಾರೆ”

“ಕ್ಯಾಮರಾ ಅಳವಡಿಸಿದರೆ?”

“ಅಳವಡಿಸಿದ್ದೇವಲ್ಲ! ಒಬ್ಬನಂತೂ ಸಿಗ್ನಲ್ ಲೈಟ್ ಕಂಬವನ್ನೇ ಏರುತ್ತಿದ್ದ. ಏಕೆಂದು ಕೇಳಿದರೆ ಕಂಬ ಹತ್ತಿ ಕ್ಯಾಮರಾ ತಲುಪಿ ಸೆಲ್ಫಿ ತೆಗೆದುಕೊಳ್ಳುತ್ತೇನೆ ಎಂದ”

“ಆಟೋರಿಕ್ಷಾಗಳನ್ನು ಬ್ಯಾನ್ ಮಾಡಿದರೆ ಹೇಗೆ?”

“ಛೆ! ಬಿಡ್ತು ಅನ್ನಿ. ರಿಕ್ಷಾ ಬಹೂಪಯೋಗಿ. ಜ್ಯಾಮೆಟ್ರಿ ಕಲಿಯುವುದರಿಂದ ಹಿಡಿದು ಭಕ್ತಿಪಂಥದವರೆಗೆ ಆಟೋಗಳ ಉಪಯೋಗವಿದೆ” ಮಧ್ಯದಲ್ಲಿ ತಲೆಹಾಕಿ ಕೀರಲಿದ ಕಿಸ್ನಪ್ಪ.

ಅದಕ್ಷರು ಕುತೂಹಲದಿಂದ “ಜ್ಯಾಮೆಟ್ರಿಗೂ ರಿಕ್ಷಾಗೂ ಏನು ಕಿಸ್ನಪ್ಪ ಸಂಬಂಧ?” ಎಂದರು.

“ಐತೆ ಸಾರ್. ಪೂರ್ಣ ಎಡದಿಂದ ಪೂರ್ಣ ಬಲಕ್ಕೆ ಚಲಿಸುವ ಆಟೋದ ಪಥವೇ ಸೆಮಿಸರ್ಕಲ್. ‘ಬರ್ತೀಯೇನಪ್ಪಾ’ ಎಂದು ಎಲ್ಲಿಗೆ ಕೇಳಿದರೂ ಆಟೋ ಡ್ರೈವರ್ನ ಮುಖದಲ್ಲಿ ಮೂಡುವುದೇ ವಕ್ರರೇಖೆ. ರಸ್ತೆಯ ಎಡಭಾಗದಲ್ಲಿರುವ ಆಟೋ ಐವತ್ತು ಅಡಿಗಳ ನಂತರ ಬಲಭಾಗಕ್ಕೆ ಹೋಗಬೇಕಾದಾಗ ಇರುವ ತುದಿಯಿಂದ ಆ ತುದಿಗೆ ಹೋಗುವ ಪಥವೇ ಡಯಾಗೊನಲ್. ಆಟೋ ಚಕ್ರಗಳನ್ನು ಬಿಂದುಗಳೆಂದು ಪರಿಗಣಿಸಿದರೆ ಮೂರೂ ಚಕ್ರಗಳನ್ನು ಸೇರಿಸುವ ರೇಖೆಗಳಿಂದ ಮೂಡುವುದೇ ತ್ರಿಕೋಣ....”

“ಡ್ರೈವರ್ರೂ ಕೋಣ ಆಗಿದ್ದರೆ ಚತುಷ್ಕೋಣವಾ?” ಮೂಗು ತೂರಿಸಿದ ತರಲೆ ಮೂಗ.

“ಸುಮ್ಮೂತ್ಕೊಳಯ್ಯಾ... ಆಟೋ ಓಡುತ್ತಿರುವಾಗ ಪಕ್ಕದಿಂದ ಧಡಿ ಹೊಟ್ಟೆಯವನೊಬ್ಬ ಅಡ್ಡ ಬಂದನೆಂದುಕೊಳ್ಳಿ. ಆಟೋ ಅವನ ಚಾಚಿದ ಹೊಟ್ಟೆಯ ಮುಂತುದಿಯನ್ನು ಲೈಟಾಗಿ ಸವರಿಕೊಂಡುಹೋಗುತ್ತದಲ್ಲಾ, ಆ ಪಥವೇ ಟ್ಯಾಂಜೆಂಟ್. ಆಟೋದವನು ಫುಲ್ ಸ್ಪೀಡಲ್ಲಿ ಹೋಗುವಾಗ ಎಡಭಾಗವನ್ನು ಕೊಂಚವೇ ವಾಲಿಸಿಕೊಂಡು ಸಾಗುವನಲ್ಲ, ಅದೇ ಲಘುಕೋನ. ರಾತ್ರಿ ಹತ್ತರ ನಂತರ ಡಬಲ್ ಕೇಳಿದಾಗ ಗಿರಾಕಿ ಕೊಡುವುದಿಲ್ಲವೆಂದರೆ ಸೆಟೆದು ಕುಳಿತುಕೊಳ್ಳುವ ಭಂಗಿಯೇ ಲಂಬಕೋನ. ಆಟೋ ನಿಂತಾಗ ಮೀಟರ್ ಎಷ್ಟಾಗಿದೆಯೆಂದು ನೋಡಲು ಡ್ರೈವರ್ ಸಂಪೂರ್ಣ ಹಿಂದಕ್ಕೆ ಬಾಗಿ ನೋಡುವ ಭಂಗಿಯೇ ವಿಶಾಲಕೋನ”

“ಸಾಕು ಮಾಡಯ್ಯ. ಅದೇನೋ ಭಕ್ತಿಪಂಥವೆಂದೆಯಲ್ಲ, ಅದರ ಬಗ್ಗೆ ಹೇಳು” ಹಿರಿಯರಾದ ಹಿರಣ್ಯಾಚಾರ್ಯರು ಕೇಳಿದರು.

“ಆಟೋ ಟರ್ರನೆ ಹೊರಟು ಭರ್ರನೆ ಸಾಗಿ ಕ್ರಾಸಿಂಗ್‌ನಲ್ಲಿ ಕಿರ್ರನೆ ಬ್ರೇಕ್ ಹಾಕುತ್ತಾ ಸ್ಕಿಡ್‌ನಲ್ಲೇ ಚಲಿಸುವಾಗ ಹತ್ತಿರದಲ್ಲಿರುವ ಜನರು ಛಂಗನೆ ನೆಗೆಯುತ್ತಾ ‘ಆಕ್ಸಿಡೆಂಟ್ ಆಗದೆ ಮನೆಗೆ ಸೇರುವಂತೆ ಕಾಪಾಡಪ್ಪಾ’ ಎಂದು ಭಗವಂತನಲ್ಲಿ ಬೇಡುತ್ತಾರೆ. ಎಂತಹ ನಾಸ್ತಿಕನಲ್ಲೂ ಭಯ ಹುಟ್ಟಿಸುವ ಮೂಲಕ ಭಕ್ತಿಪಥಕ್ಕೆ ತರುವುದು ಆಟೋದ ವೈಶಿಷ್ಟ್ಯ. ಆದ್ದರಿಂದ ಆಟೋಗಳನ್ನಂತೂ ಬ್ಯಾನ್ ಮಾಡಕ್ಕಾಗಾಕಿಲ್ಲ” ಎಂದು ನುಡಿದು ಸೆಟೆದು ಕುಳಿತ ಕಿಸ್ನಪ್ಪ.

“ರಸ್ತೆಗಳಲ್ಲಿ ಅಡ್ಡಾದಿಡ್ಡಿ ಪಾರ್ಕಿಂಗ್ ಮಾಡೋದೇ ಟ್ರಾಫಿಕ್ ಜಾಮ್‌ಗೆ ಕಾರಣ. ಪಾರ್ಕಿಂಗ್ ಬ್ಯಾನ್ ಮಾಡಿದರೆ?”

“ಆಗಲ್ಲ. ಪಾರ್ಕಿಂಗ್ ಇಲ್ದೆ ಗಿರಾಕಿ ಬರ್ತಿಲ್ಲ, ಗಿರಾಕೀನ ಕಿತ್ಕೊಂಡ ಸರ್ಕಾರಕ್ಕೆ ಓಟ್ಹಾಕಲ್ಲಾಂತ ಉದ್ಯೋಗಿಗಳು ತೀರ್ಮಾನಿಸಿಬಿಟ್ಟರೆ ನಮಗೆ ಉದ್ವೇಗಪರ್ವ ಆರಂಭವಾಗತ್ತೆ”

“ಫುಟ್‌ಪಾತ್ ವ್ಯಾಪಾರಿಗಳನ್ನು ಅಟ್ಟಿ ಅಲ್ಲಿ ಪಾರ್ಕಿಂಗ್ ಮಾಡಿದರೆ?”

“ಉಂಟೇ!!!? ಅಲ್ಲಿರುವವರೇ ನಮ್ಮ ಪೇದೆಗಳ ಅನ್ನದಾತರು, ಹಣ್ಣುದಾತರು, ವಸ್ತ್ರದಾತರು, ಧನದಾತರು; ಅಲ್ಲದೆ ಎಲೆಕ್ಷನ್ ಟೈಮಲ್ಲಿ ಎಸೆಯಬೇಕಾದ ಟೊಮ್ಯಾಟೋ, ಮೊಟ್ಟೆಗಳು ನಮಗೆ ಬಿಟ್ಟಿ ಸಿಗೋದೇ ಅಲ್ಲಿ” ನುಡಿದರು ಅದಕ್ಷರು.

“ಒಂದು ಸುಳ್ಳು ಸಮೀಕ್ಷೆ ನಡೆಸಿ ಹಿಂದಿನ ವರ್ಷಕ್ಕಿಂತ ಈ ವರ್ಷ ಆ ಟ್ರಾಫಿಕ್ ಕಡಿಮೆಯಾಗಿದೆಯೆಂದು ಸಾರಿದರೆ?”

“ಬೆರಿಫಿಕ್ ಐಡಿಯಾ” ಎಂದರು ಅದಕ್ಷರು. ಆ ನಿರ್ಣಯವನ್ನೇ ಠರಾವು ಮಾಡುವುದರೊಂದಿಗೆ ಸಭೆ ಬರಖಾಸ್ತಾಯಿತು. ▪

ದೊಡ್ಡ ತ್ಯಾಗ

ಕನಕಾಪುರ ನಾರಾಯಣ

ಅನಂತಪುರ ಎಂಬ ಊರಿನಲ್ಲಿ ಮದನಸೇನಾ ಎಂಬ ಸುಂದರಿಯಾದ ಯುವತಿಯನ್ನು ಧರ್ಮದತ್ತ ಎಂಬ ಯುವಕ ಮೋಹಿಸುತ್ತಿದ್ದ, ಪ್ರತಿದಿನ ಆಕೆಯನ್ನು ಹಿಂಬಾಲಿಸುತ್ತಿದ್ದ, ಆತನನ್ನು ಮಾಡುವೆಆಗಲು ಪೀಡಿಸುತ್ತಿದ್ದ, ಆಕೆ ಆತನನ್ನು ವರಿಸಲು ಒಪ್ಪದಿದ್ದ ಕಾರಣ ಆಳವಾದ ನದಿಗೆ ಬಿದ್ದು ಆತ್ಮಹತ್ಯೆಗೆ ಪ್ರಯತ್ನಿಸಿದ. ಈಜು ಬಾರದೆ ಮುಳುಗುತ್ತಿದ್ದ ಅವನನ್ನು ಆಕೆಯೇ ಧುಮುಕಿ ಪ್ರಾಣ ಉಳಿಸಿದಳು. ನಂತರ ಆತನಿಗೆ ಬುದ್ಧಿಹೇಳಿ ಅಲ್ಲಿಂದ ಹೊರಟು ಬಂದಳು. ಆದರೂ ಧರ್ಮದತ್ತ ಮತ್ತೆ ಆಕೆ ಒಪ್ಪದಿದ್ದಲ್ಲಿ "ಹುಣ್ಣಿಮೆಯ ರಾತ್ರಿ ನೀರಿಗೆ ಧುಮುಕುವೆ" ಎಂದು ಕೂಗಿ ಹೇಳಿದ. ಮಾದನಸೇನಾ ಲೆಕ್ಕಿಸದೆಅಲ್ಲಿಂದ ಹೊರಟಳು. ಅಂದು ಸಂಜೆ ಒಬ್ಬ ದೂರದ ಸಂಬಂಧಿಗಳು ಆಕೆಯ ಮನೆಗೆ ಬಂದರು. ಅವರ ಮಗ ಸಮುದ್ರದತ್ತನಿಗೆ ಆಕೆಯನ್ನು ಕನ್ಯಾದಾನವಾಗಿ ಕೇಳಲು ಬಂದಿದ್ದರು.

ಎಲ್ಲರಿಗೂ ಒಪ್ಪಿಗೆ ಆದಕಾರಣ ಒಂದೇ ವಾರದಲ್ಲಿ ಮಾಡುವೆ ನಡೆಯಿತು. ಮಾಡುವೆ ಕೂಡಾ ಹುಣ್ಣಿಮೆಯ ದಿನವೇ ನಡೆಯಿತು. ಮೊದಲ ರಾತ್ರಿ ವರನಿಗಾಗಿ ತನ್ನ ಕೋಣೆಯಲ್ಲಿ ಆಕೆ ಕಾಯುತ್ತಿರಲು ಹೊರಗೆ `ಸಿದ್ಧ' ಎಂಬ ಕಳ್ಳಕಿಟಕಿಯಿಂದ ಆಕೆಯನ್ನು ನೋಡಿದ, ಆಕೆಯ ಸೌಂದರ್ಯವನ್ನು ಕಂಡು ತಾನು ಮದುವೆಯಾದರೆ ಅಂತಹ ಹೆಣ್ಣನ್ನೇ ಆಗುವೆ, ಎಂದು ಕನಸು ಕಾಣುತ್ತಾ ಚಿಂತಾಕ್ರಾಂತನಾಗಿ ಆಗಸ ನೋಡುತ್ತಾ ಒಂದುರಸ್ತೆಯ ಬಳಿ ಕುಳಿತ. ಸಮುದ್ರಸೇನ ಮೊದಲ ರಾತ್ರಿಯ ಕಳೆಯಲು ಕೋಣೆಯೊಳಗೆ ನಡೆದ, ಕೂಡಲೇ ಮದನಸೇನಾಳಿಗೆ ಧರ್ಮಸೇನನ ನೆನಪಾಯಿತು, ಪತಿಯ ಅನುಮತಿ ಪಡೆದು ಆತನ ಸಾವುತಪ್ಪಿಸಲು ಹೊರಟಳು. ಸಮುದ್ರಸೇನನು ಆಕೆಗೆ ಅರಿಯದಂತೆ ಹಿಂದೆಯೇ ಹಿಂಬಾಲಿಸಿದ. ಆದರೆ ಸಿದ್ಧ ದಾರಿಯಲ್ಲಿ ಅವಳನ್ನು ಅಡ್ಡಗಟ್ಟಿದ, ಆಕೆ ನಿಧಾನವಾಗಿ ವಿಷಯ ತಿಳಿಸಿದಳು, "ಸರಿ ನಾನೂನಿನಗಾಗಿ ಕಾಯುವೆ" ಎಂದು ಕಳುಹಿಸಿಕೊಟ್ಟ. ಧರ್ಮಸೇನನ ಮನೆಗೆ ಬಂದು ನೋಡಲು ಆತ ಚಡಪಡಿಸುತ್ತಿದ್ದ, ಆತ್ಮಹತ್ಯೆಗೆ ಗಟ್ಟಿ ಮನಸ್ಸು ಮಾಡಿ ಹೊರಟೇಬಿಟ್ಟ, ಆ ಕೂಡಲೇ ಅಲ್ಲಿಗೆ ಬಂದಚಂದ್ರಸೇನಾ ಆತನನ್ನು ತಡೆದಳು. ಆಕೆಗೆ ಮದುವೆ ಆಗಿದ್ದೂ, ಅವನ ಪ್ರಾಣ ಉಳಿಸಲು ಮೊದಲ ರಾತ್ರಿಯೇ ಆ ನಡುರಾತ್ರಿ ಅನುಮತಿ ಪಡೆದು ಬಂದದ್ದು,ಎಲ್ಲವನ್ನೂ ತಿಳಿದು ಆಕೆಯ ಗಂಡನ ಪ್ರಶಂಸೆಮಾಡಿದ. ಆಕೆಗೆ ವಂದಿಸಿ ಆಕೆಯನ್ನು ತನ್ನ ಮನೆಗೆ ಹಿಂತಿರುಗಲು ಹೇಳಿದ. ಈ ದೃಶ್ಯವನ್ನು ಸಿದ್ಧ ಹಾಗೂ ಸಮುದ್ರಸೇನ ಇಬ್ಬರೂ ಬೇರೆ ಬೇರೆ ಕಡೆಯಿಂದ ಕದ್ದು ನೋಡಿದರು. ಮತ್ತೆ ವಾಪಸ್ ಬರುವಾಗಕಳ್ಳ ಆಕೆಯ ಎದಿರಾದ, ಆಗೆಯ ಗುಣ ಮೆಚ್ಚಿ ವಂದಿಸಿ ಮನೆಗೆ ಕಳುಹಿಸಿಕೊಟ್ಟ. ಅದನ್ನು ಸಮುದ್ರಸೇನ ಮರೆಯಲ್ಲಿ ನಿಂತು ನೋಡಿದ. ಚಂದ್ರಸೇನಾ ತನ್ನ ಮನೆಗೆ ಹಿಂದಿರುಗಲು ಅವಳ ಹಿಂದೆಯೇಸಮುದ್ರಸೇನನೂ ಬಂದ. ಆಕೆಯ ಧೈರ್ಯ ಮತ್ತು ಗುಣಕ್ಕೆ ಮೆಚ್ಚಿದ, ಆತನ ತ್ಯಾಗಕ್ಕೆ ಚಂದ್ರಸೇನಾ ಕೃತಜ್ಞಳಾದಳು ..... ಎಂದು ಹೇಳಿ ಕಥೆ ಅಲ್ಲಿಗೇ ನಿಲ್ಲಿಸಿತು ಬೇತಾಳ.....

ಬೇತಾಳದ ಪ್ರಶ್ನೆ ಹೀಗಿತ್ತು: "ಸಮುದ್ರಸೇನ, ಸಿದ್ಧ, ಧರ್ಮಸೇನ ಈ ಮೂವರಲ್ಲಿ ಯಾರದು ದೊಡ್ಡ ತ್ಯಾಗ"

ಅದಕ್ಕೆ ವಿಕ್ರಮನ ಉತ್ತರ: "ಯಾವ ಸಂಬಂಧವೂ ಇಲ್ಲದ ಸಿದ್ಧನದೇ ಉನ್ನತ ತ್ಯಾಗ, ಮದನಸೇನಾಳನ್ನು ಅಪಹರಿಸಲು ಯಾವ ನಿರ್ಬಂಧವೂ ಇರಲಿಲ್ಲ ಆತನಿಗೆ, ಆದರೂ ಅವನು ಆಕೆಯನ್ನುಬಿಟ್ಟುಕೊಟ್ಟನು " ಎಂದಿತ್ತು.

ಉತ್ತರ ಮೆಚ್ಚಿದ ಬೇತಾಳ " ಭಲೇ ವಿಕ್ರಮ ಅದೇ ಸರಿಯಾದ ಉತ್ತರ " ಎಂದುಹೇಳಿ ಬೇತಾಳ ವಿಕ್ರಮನ ಬೆನ್ನು ಬಿಟ್ಟು ಹಾರಿ ಹೋಯಿತು.■

ಹಾಲುಬಾಯಿ

ಬೇಕಾಗುವ ಸಾಮಗ್ರಿಗಳು

- ಅರ್ಧ ಕಿಲೋ ಅಕ್ಕಿ
- ಒಂದು ತೆಂಗಿನ ಕಾಯಿ ಅಥವಾ ಗಟ್ಟಿಯಾದ ಕೋಕನಟ್ ಕ್ರೀಮ್
- ಒಂದು ಕಿಲೋ ಬೆಲ್ಲ
- ಚಿಟಿಕೆ ಉಪ್ಪು
- ಯಾಲಕ್ಕಿ 6

ಮಾಡುವ ವಿಧಾನ

- ತೆಂಗಿನ ಕಾಯನ್ನು ಸಣ್ಣಗೆ ತುರಿದು, ಅದನ್ನು ರುಬ್ಬಿ, ಹಾಲನ್ನು ಮಾತ್ರ ತೆಗೆದಿಟ್ಟುಕೊಳ್ಳಿ.
- 1 1/2 ಗಂಟೆಯ ಕಾಲ ನೆನೆಸಿದ ಅಕ್ಕಿ,ತೆಂಗಿನ ಹಾಲು,ಉಪ್ಪು,ಬೆಲ್ಲ ಯಾಲಕ್ಕಿ ಎಲ್ಲವನ್ನೂ ರುಬ್ಬಿಕೊಳ್ಳುವುದು
- ಇದನ್ನು ದಪ್ಪ ತಳದ ಪಾತ್ರೆಯಲ್ಲಿ ಒಲೆಯ ಮೇಲಿಟ್ಟು ಹದವಾಗಿ ಕೈ ಆಡಿಸುತ್ತಾ ಹಲ್ವದಂತೆ ಮಾಡಿಕೊಳ್ಳಿ
- ತುಪ್ಪ ಸವರಿದ ತಟ್ಟೆಯಲ್ಲಿ ಸುರಿದು ಗೋಡಂಬಿ ದ್ರಾಕ್ಷಿ ಉದುರಿಸಿ, ಬೆಚ್ಚಗಿರುವಾಗಲೇ ಚಾಕುವಿನಿಂದ ಚೌಕವಾಗಿ ಕತ್ತರಿಸಿಡಿ.
- ಪೂರ್ತಿ ಆರಿದ ನಂತರ ತಟ್ಟೆಯಲ್ಲಿ ಜೋಡಿಸಿ ಇಟ್ಟು ಸವಿಯಿರಿ

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಒಗಟು

೧. ಹತ್ನಾರ್ದ ಮರಕ್ಕೆ , ಹತ್ತುತನೆ ಕರಿಯಣ್ಣ

೨. ನಿನ್ನ ಹೊಟ್ಟೆಯ ಮೇಲೆ , ನನ್ನ ಹೊಟ್ಟೆ

ಉತ್ತರಕ್ಕೆ ಪುಟ ೧೨ ನೋಡಿ

ಗೆ ...

ಸಖನನ್ನೆ ಬೆದಕು ಸಖಿಯನ್ನೆ ಬೆದಕು
ಸರಳತೆಯಿಂದ ಬದುಕು;
ಸಹಕರಿಸಿ ಬದುಕು ಸಮವರಿತು ಬದುಕು
ಶ್ರಮವಹಿಸಿ ದಿನವು ಬದುಕು

ಮತವರಿತು ಬದುಕು ಮತಿ ಅರಿತು ಬದುಕು
ಜೊತೆಯಾಗಿ ನೀನು ಬದುಕು
ಗತಿ ಅರಿತು ಬದುಕು ಮಿತಿ ಅರಿತು ಬದುಕು
ಹಿತ ಮಾಡಿ ನೀನು ಬದುಕು

ಧನವಲ್ಲ ಬದುಕು ಕ್ಷಣಿಕವು ಬದುಕು
ತೃಣದಷ್ಟೇ ತಿಂದು ಬದುಕು
ಗುಣವಳೆದು ಬದುಕು ಬನವಲೆದು ಬದುಕು
ಘನ ದೇವನರಿತು ಬದುಕು

ಮನುಜನಾಗಿ ಬದುಕು ಅನುಜನಾಗಿ ಬದುಕು
ಜಗ ತತ್ವವರಿತು ಬದುಕು
ಅವನಿಯಲೆ ಬದುಕು ಅರಿವಿನಲೆ ಬದುಕು
ಅವರಿವರ ಕಲೆತು ಬದುಕು

ಸುಳ್ಳಳಿದು ಬದುಕು ಸೊಲ್ಲಡಗಿ ಬದುಕು
ಬಲ್ಲಿದವರ ಕೂಡಿ ಬದುಕು
ಚಿತೆ ಕೊನೆಯ ಬದುಕು ಕಟ ಕಡೆಯ ಬದುಕು
ಹಠ ಮಾಡಿ ಮಾಡಿ ಬದುಕು

-ಮಾಲು, ಅಡಿಲೈಡ್

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"


ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಮಹಾಂತೇಶ್ ಸಿ.
ಇವರ "ಹಂಗ ಸುಮ್ನೆ..."

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

SRI KRISHNA TRAVEL
Travel with a Smile
Contact Mr Sudheendra Rao EMAIL
Mobile 0415 291 723

choice HOME LOANS
Contact Mr.Sathya Bhat EMAIL
Mobile 0412 918 511

Umesh Nagasandra FT
ABN 55 405 83 51 32
Umesh Nagasandra
Mob: 0401 034 456
Email: umesh61@gmail.com
Web: www.arman.com.au
P.O. Box # 4127, Tranmere North, South Australia-5073, Australia.
Contact Mr Umesh EMAIL
Mobile 0401 034 456

AUSTINDIA SANGAM TRANSPORT
Contact Mr Eranna Gotyal EMAIL
Mobile 0404 215 605

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ಬೆಳಕಿಗಿಂತ ವೇಗವಾಗಿ ಪ್ರಯಾಣಿಸಬಲ್ಲದ್ದು.

೨. ಮುನಿದಾಗ ಮಾರಿಯಾದವಳು, ನಾರಿಯಾಗುವುದು ಯಾವಾಗ?



೩. ತೆಂಗಿನ ನಾರನ್ನು ಆಂಗ್ಲ ಭಾಷೆಯಲ್ಲಿ ಹೀಗನ್ನಿ

೪. ನಾರಾಯಣನಿಂದ ಮೋಕ್ಷ ಪಡೆದ ವನ್ಯಜೀವಿ.

೫. ಸೋತಿಲ್ಲ ಆದರೂ ಗೆಲುವು ಪರರದ್ದು.

೬. ಚಳಿಗಾಲಕ್ಕೆ ಸೊಗಸು ಕಡಲೇಬೇಳೆಯ ಗರಿಗರಿಯಾದ ಈ ಸ್ವಾದಿಷ್ಟ ತಿನಿಸು.

೭. ಮಡದಿಯನ್ನು ಗೌರವದಿಂದ ಹೀಗೆ ಸಂಭೋದಿಸಬಹುದೇ?

೮. ಕನ್ನಡದ ಚಿಕ್ಕಪ್ಪ ಹಿಂದಿಯಲ್ಲಿ?



ರಾಜರಾಗಿದ್ದೇ ರಾಜಕೀಯ ಹುದ್ದೆಯನ್ನು ಅಲಂಕರಿಸಿದ್ದವರು

ನಿಮ್ಮ ಉತ್ತರ ಇಮೇಲ್ ಮಾಡಿ, (horanadachilume@gmail.com)

ಏಪ್ರಿಲ್ ೨೦ ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಫೆಬ್ರವರಿ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಉತ್ತರಿಸಿದವರು

- ಸುಮ ಅಶೋಕ್, ಸಿಡ್ನಿ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ವೀಣಾ ಕೌಶಿಕ್, ಸಿಡ್ನಿ
- ಚೈತ್ರ ಕುಮಾರ್, ಸಿಡ್ನಿ
- ಗೀತಾ ಟಿ. ಆರ್, ಬೆಂಗಳೂರು
- ಪುಷ್ಪವಲ್ಲಿ ಚಂದ್ರಶೇಖರ್, ಬೆಂಗಳೂರು
- ವತ್ಸಲಾ ದ್ವಾರಕಾನಾಥ್, ಬೆಂಗಳೂರು
- ರಾಜೇಶ್ವರಿ, ಸಿಡ್ನಿ
- ಮೋಹನ ಬಡಿಗೇರ, ಸಿಡ್ನಿ
- ಹರಿಣಿ ರಾವ್, ನವದೆಹಲಿ

೧. ಹದಿನಾಲ್ಕು ವರುಷ ಕಳೆದದ್ದು ಮನೆಯಲ್ಲಲ್ಲ

ವ	ನ	ವಾ	ಸ

೨. ಕತ್ತಲಿನಿಂದ ಈ ಕಡೆಗೆ

ಬೆ	ಳ	ಕು

೩. ಗೊಗ್ಗಯ್ಯ ಬಂದರೂ, ನಿದ್ರೆ ಜೋರಾಗಿದೆ

ಗೊ	ರ	ಕೆ

೪. ..... ಪಟ್ಟರೆ ಒಳ್ಳೆಯ ಫಲ

ಶ್ರ	ಮ

೫. ಏಟಿಯಂ ಗಳ ಮುಂದೆ ನನಗಾಗಿ ಸಾಲು

ಹ	ಣ

೬. ಯುವತಿಯ ಕಂಡ ಯುವಕನಿಗೆ ಎದೆಯಲ್ಲಿ ಏನೋ

ತ	ಳ	ಮ	ಳ

ಉತ್ತರ: ಚಾವುಂಡರಾಯ ಕೆತ್ತಿಸಿದ ದಿಗಂಬರ ನಿಂತ ಸ್ಥಳ

ಶ್ರ	ವ	ಣ	ಬೆ	ಳ	ಗೊ	ಳ

ಜಾಣ ಕರ್ನಾಟಕ

೧. ಅನೇಕ ತಾಳೆಗರಿಗಳನ್ನು ರಕ್ಷಿಸಿ, ಪೋಷಿಸುತ್ತಿರುವ ಮೈಸೂರು ನಗರದ ಲೈಬ್ರೆರಿ ಯಾವುದು

೨. ಕರ್ನಾಟಕ ರಾಜ್ಯದ ಮೊದಲ ವಿಶ್ವವಿದ್ಯಾಲಯ ಮತ್ತು ಮೊದಲ ವೈದ್ಯಕೀಯ ವಿಶ್ವವಿದ್ಯಾಲಯ ಯಾವುದು

ಸರಿ ಉತ್ತರಕ್ಕೆ ಪುಟ ೧೫ ನೋಡಿ

ಒಗಟು – ಉತ್ತರ

೧.ಕರಿ ಇರುವೆ ೨. ಬೀಸೋ ಕಲ್ಲು

ಹಾಸ್ಯ ಚಿಲುಮೆ

ದೇವರು: ಭಕ್ತಾ ಏಳು ನಿನ್ನ ತಪಸ್ಸಿಗೆ ಮೆಚ್ಚಿದ್ದೇನೆ,ಎರಡು ವರವನ್ನು ಕೇಳು

ಭಕ್ತ:ಮೊದಲನೆಯದು ನನಗೆ ನಿದ್ದೆಯಲ್ಲೆ ಸಾವು ಬರಬೇಕು.

ದೇವರು: ತಥಾಸ್ತು ಸರಿ ಎರಡನೆಯದು?

ಭಕ್ತ:ಎರಡನೆಯದು ನನಗೆ ಎಂದಿಗೂ ನಿದ್ದೇನೇ ಬರಕೂಡದು.

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

ರಚನೆ: ಲತಾ ಹೇಮಂತ್

ಸಮಕಾಲೀನ ದಾಸಸಾಹಿತ್ಯ ಅಧ್ಯಯನದ ಹಿನ್ನಲೆಯಲ್ಲಿ ಸಂಶೋಧನೆ - ಸಮಸ್ಯೆಗಳು - ಈ ಕುರಿತ ಕೆಲವು ವಿಚಾರಗಳು

ವಿದ್ಯಾವಾಚಸ್ಪತಿ
ಡಾ||ಅರಳುಮಲ್ಲಿಗೆ
ಪಾರ್ಥಸಾರಥಿ

ಇಂದು ಜಗತ್ತಿನಲ್ಲಿ, ಎಲ್ಲ ಕ್ಷೇತ್ರಗಳಲ್ಲಿಯೂ ನಡೆಯುತ್ತಿರುವ ಸಂಶೋಧನೆಯಿಂದಾಗಿ, ಅದ್ಭುತ ಪ್ರಗತಿ ಸಾಧ್ಯವಾಗಿದೆ. ಸಾಹಿತ್ಯದಿಂದ ಹಿಡಿದು ನ್ಯುಕ್ಲಿಯರ್ ತಂತ್ರಜ್ಞಾನದವರೆಗೆ ಎಲ್ಲ ರಂಗಗಳಲ್ಲಿಯೂ ಸಂಶೋಧನೆ ಇಂದು ಅನಿವಾರ್ಯ ಹಾಗೂ ಪ್ರಾಧಾನ್ಯವೆನಿಸಿದೆ. ಇತ್ತೀಚಿನ ದಿನಗಳಲ್ಲಿ ಭಾರತದಲ್ಲಿಯೂ ಸಂಶೋಧನೆಯತ್ತ ಹೆಚ್ಚಿನ ಗಮನ, ಆದ್ಯತೆ ಕಂಡುಬರುತ್ತಿದೆ. ದಾಸಸಾಹಿತ್ಯವೂ ಇದಕ್ಕೆ ಹೊರತಲ್ಲ. ವಚನಸಾಹಿತ್ಯದಲ್ಲಿ ಅನೇಕ ಆಯಾಮಗಳಲ್ಲಿ ಈ ಬಗ್ಗೆಯ ಸಂಶೋಧನೆ ಆಗುತ್ತಿದೆ. ದಾಸಸಾಹಿತ್ಯ ಕ್ಷೇತ್ರ ಮತ್ತಷ್ಟು ಅಧಿಕೃತ ಹಾಗೂ ಸ್ವೀಕಾರಾರ್ಹವಾಗಲು ಉತ್ತಮ ಗುಣಮಟ್ಟದ ಸಂಶೋಧನೆಯ ಅಗತ್ಯವಿದೆ.

ಬದಲಾಗುತ್ತಿರುವ ಆಧುನಿಕ ಯುಗದ ಮನೋಧರ್ಮಕ್ಕೆ ಅನುಗುಣವಾಗಿ ಕನ್ನಡ ದಾಸಸಾಹಿತ್ಯದ ಅಧ್ಯಯನವು, ಚಿಂತನಶೀಲವಾಗಿ, ವೈಜ್ಞಾನಿಕ ವಿಶ್ಲೇಷಣೆಗಳೊಡನೆ ಹೊಸಹೊಸ ಸಾಧ್ಯತೆಗಳನ್ನು ಕಂಡುಕೊಳ್ಳುತ್ತಿದೆ. ಅನ್ವೇಷಣೆ, ಅವಿಷ್ಕಾರ, ಸಂಶೋಧನೆ, ಹೊಸದೃಷ್ಟಿ, ಅರ್ಥಪೂರ್ಣಬರಹದ ಅಗತ್ಯ ಇಂದು ಎಂದಿಗಿಂತಲೂ ಹೆಚ್ಚಿದೆ.

ಆದರೆ ದಾಸಸಾಹಿತ್ಯದಲ್ಲಿ ಸಂಶೋಧನೆಯ ಮಾರ್ಗ ಅಷ್ಟು ಸುಲಭವಲ್ಲ. ಈ ದಾರಿಯಲ್ಲಿ ಎದುರಾಗುವ ಸಮಸ್ಯೆಗಳು ಅನೇಕ, ಅವುಗಳಲ್ಲಿ ಮುಖ್ಯವಾದವು ಹೀಗಿವೆ-

1) ಯಾವುದೇ ವಿಷಯದ ಬಗ್ಗೆ ಸಂಶೋಧನೆ ಮಾಡಲು ಹೊರಟಾಗ, ಅದರ ಬಗ್ಗೆ ಅಧಿಕೃತವೆನಿಸಬಹುದಾದ, ಹತ್ತಾರು ಆಕರಗ್ರಂಥಗಳು ದೊರೆಯುವುದಿಲ್ಲ. ವಚನಸಾಹಿತ್ಯದಲ್ಲಿ ನೂರಾರು ಗ್ರಂಥಗಳು ಲಭ್ಯವಿದೆ. ಆದರೆ ದಾಸಸಾಹಿತ್ಯದಲ್ಲಿ ಸಂಪೂರ್ಣ ಅವಲಂಬಿಸಬಹುದಾದ ಮೂಲ ಆಕರ ಗ್ರಂಥಗಳು ಬಹು ಸಂಖ್ಯೆಯಲ್ಲಿ ದೊರೆಯದಿರುವುದು.

2) ಇನ್ನು ಹಸ್ತಪ್ರತಿಯ ಅನ್ವೇಷಣೆ, ಮೊದಲು ಎಲ್ಲಿ ಅಪ್ರಟಿತ ಹಸ್ತಪ್ರತಿಗಳು ದೊರಕಬಹುದು ಎಂಬ ಸುಳಿವು ದೊರೆಯುವುದೇ ಕಷ್ಟ. ಇನ್ನು ಹಾಗೆ ಸಿಕ್ಕಾಗ ಅಲ್ಲಿ ಹತ್ತಾರು ಬಾರಿ ಹೋಗಬೇಕು. ಅದನ್ನು ಹೊಂದಿರುವ ಸಂಪ್ರದಾಯಸ್ತರು, ಮಡಿ ಎಂಬ ಕಾರಣದಿಂದಲೋ ಏನೋ ಅದನ್ನು ಸುಲಭವಾಗಿ ತೋರಿಸುವುದಿಲ್ಲ.

3) ಇನ್ನು ಹರಿದಾಸರ ಮನೆತನದವರ ಬಳಿ ಬಹಳಷ್ಟು ವಿಚಾರಮಾಡಿ, ಪ್ರಸ್ತಾಪಮಾಡಿ, ಅವರ ಮನವೊಲಿಸಿ, ಅವರಲ್ಲಿರುವ ಹಸ್ತಪ್ರತಿಗಳ ಅಧ್ಯಯನ ಮಾಡುವುದು. ಅನೇಕ ಬಾರಿ ಹರಿದಾಸರ ಆರಾಧನಾ ಸಂದರ್ಭ ಬಿಟ್ಟರೆ, ಆ ಮನೆತನದವರು ಎಲ್ಲಿರುತ್ತಾರೋ ಎಂಬ ವಿಷಯವೇ ತಿಳಿಯುವುದಿಲ್ಲ. ಉದಾಹರಣೆಗೆ ಬೇಲೂರು ಕೇಶವದಾಸರ 'ಭಕ್ತವಿಜಯ' ಪ್ರಕಟಿಸಿದ ಮೈಸೂರಿನ ಡಿವಿಕೆ ಮೂರ್ತಿಯವರು, ಆ ಗ್ರಂಥದ ಗೌರವಧನ ತಲುಪಿಸಲು ಅವರ ಮಗ ಎಲ್ಲಿದ್ದಾರೆ ಎಂಬುದನ್ನು ಕಂಡುಹಿಡಿಯಲು ಅನೇಕ ವರ್ಷವಾಯಿತು.

4) ಇನ್ನು ಹಸ್ತಪ್ರತಿ ದೊರಕಿದರೆ ಅದರ ಭಾಷೆ, ಅದು ದೇವನಾಗರಿ, ಮರಾಠಿ, ತಮಿಳು, ತೆಲಗು ಯಾವುದೇ ಇರಬಹುದು, ಅದರ ಬಗ್ಗೆ, ಮೋಡಿ ಬರಹಗಳ ಬಗ್ಗೆ ಸರಿಯಾಗಿ ಓದುವಿಕೆ ಆಗಬೇಕು. ಹಸ್ತಪ್ರತಿಯ ಕಾಲನಿರ್ಣಯವಾಗಬೇಕು.

5) ಇನ್ನು ಹಾಡುಗಳನ್ನು ಸುಳಾದಿಗಳನ್ನು ಕೇಳಿಸಿಕೊಂಡು ಧ್ವನಿಮುದ್ರಣ ಮಾಡುವುದು. ಉದಾಹರಣೆಗೆ ಚೀಕಲಪರವಿಯಲ್ಲಿದ್ದ ಮೇಲಗಿರಿದಾಸರಿಂದ, ಮಾನವಿ ನರಸಿಂಗರಾಯರಿಂದ ವರದರಾಜಾರಾಯರು ಸುಳಾದಿಗಳನ್ನು ಹಾಡಿಸಿ ಧ್ವನಿ ಮುದ್ರಿಸಿಕೊಂಡಿದ್ದರು.

6) ಅಂಕಿತ ಸಂಧಿಗ್ಧವಿದ್ದಾಗ, ಅನೇಕ ಆಕರಗಳನ್ನು ಪರಿಶೀಲಿಸಿ ನಿರ್ಧಾರಕ್ಕೆ ಬರಬೇಕು.

7) ಸಂಶೋಧನೆಯ ಹಂತದಲ್ಲಿ ಸಾಮಾನ್ಯವಾಗಿ ಅಸಹಕಾರದ ಅನುಭವವೇ ಹೆಚ್ಚಿರುವುದರಿಂದ ಸಂಶೋಧಕರು ಆಕರ್ಷಕ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಹಸ್ತಪ್ರತಿ ಇರುವವರ ಮನವೊಲಿಸಿ, ಅವನ್ನು ಪಡೆಯುವ ಕಲೆ ಕರಗತಮಾಡಿಕೊಳ್ಳಬೇಕು.

8) ಸಂಶೋಧನೆಯ ಶಾಸ್ತ್ರೀಯ ಪಠ್ಯಕ್ರಮವನ್ನು ಅಧ್ಯಯನ ಮಾಡಿರಬೇಕು. ಸಂಶೋಧನಾ ಪದ್ಧತಿಯ ಮೂಲಸೂತ್ರಗಳು ಚೆನ್ನಾಗಿ ಗೊತ್ತಿರಬೇಕು.

ಕನ್ನಡ ಈಗ ಶಾಸ್ತ್ರೀಯ ಭಾಷೆಯಾಗಿದೆ. ಹಾಗಾಗಿ ದಾಸಸಾಹಿತ್ಯ, ವಚನಸಾಹಿತ್ಯ, ಚಿಂತನಸಾಹಿತ್ಯ, ವೈಜ್ಞಾನಿಕಸಾಹಿತ್ಯ ಮುಂತಾದ ಎಲ್ಲ ಪ್ರಕಾರಗಳಲ್ಲೂ ತಲಸ್ಪರ್ಶಿ ಪಾಂಡಿತ್ಯದ, ಸಮಕಾಲೀನ ಬದುಕಿಗೆ ಸ್ಪಂದಿಸುವಂತಹ, ಅರ್ಥವಂತಿಕೆಯ ಬರಹಗಳ ನಿರೀಕ್ಷೆ ಹೆಚ್ಚುತ್ತಿದೆ. ಸಾಹಿತ್ಯ, ಸಂಗೀತ, ಆಧ್ಯಾತ್ಮ ಮುಂತಾದ ನಾನಾ ಕ್ಷೇತ್ರಗಳಲ್ಲಿ ಅಪಾರ ಪ್ರಭಾವ ಬೀರಿರುವ ದಾಸಸಾಹಿತ್ಯ ಈಗಾಗಲೇ ಅತ್ಯಂತ ಜನಪ್ರಿಯ ಹಾಗು ಮಹತ್ವದ ಸಾಹಿತ್ಯವೆನಿಸಿಕೊಂಡಿದೆ. ಅದು ತನ್ನ ಸರಳತೆ, ಸಮಾಜಮುಖಿ, ಜನಸ್ನೇಹಿ ಸದ್ಭಾವನೆ, ಶುದ್ಧ ಸಾತ್ವಿಕ ದೈವಭಕ್ತಿ ಪ್ರಚೋದನೆ, ದೇಶೀಯತೆ ಹಾಗೂ ಗೇಯಗುಣಗಳಿಂದಾಗಿ ಪ್ರಸಿದ್ಧವಾಯಿತು. ಉತ್ತಮ ವಿಚಾರ, ಉನ್ನತ ಚಿಂತನೆಗಳನ್ನು ಜನಸಾಮಾನ್ಯರ ಆಡುಮಾತಿನಲ್ಲಿ ನೀಡಿ ಪ್ರಜಾಸಾಹಿತ್ಯವೆಂಬ ಹಿರಿಮೆಗೆ ಅದು ಪಾತ್ರವಾಯಿತು. ಕನ್ನಡ ಭಾಷೆಯನ್ನು ಸಮೃದ್ಧಗೊಳಿಸುತ್ತಾ ಶತಮಾನದಿಂದ ಶತಮಾನಕ್ಕೆ ತನ್ನ ಧಾರೆಯನ್ನು, ವೇಗವನ್ನು ಹೆಚ್ಚಿಸಿಕೊಳ್ಳುವಲ್ಲಿ ದಾಸಸಾಹಿತ್ಯವಾಹಿನಿ ಯಶಸ್ವಿಯಾಯಿತು.

ಬಾಯಿಂದ ಬಾಯಿಗೆ ಬಂದು, ಮೌಖಿಕ ಪರಂಪರೆಯಲ್ಲೇ ಉಳಿದಿದ್ದ ಪದಪದ್ಯಗಳನ್ನು ಹುಡುಕಿ, ಪರಿಷ್ಕಾರಮಾಡಿ, ಗ್ರಂಥಮುದ್ರಣ ಹಾಗೂ ಧ್ವನಿಮುದ್ರಣ ಮಾಡಿ ಅವುಗಳನ್ನು ಸಂಗ್ರಹ, ಹಾಗೂ ಪ್ರಕಟಣೆ ಮಾಡುವ ಕೆಲಸ ಆಗುತ್ತಿದೆ. ಆದರೆ ಒಂದು ನಿರ್ದಿಷ್ಟವಾದ ಶಾಸ್ತ್ರೀಯಕ್ರಮ, ಸಂಶೋಧನಾತ್ಮಕ ಸಂವಿಧಾನ ಹಾಗೂ ಹರಿದಾಸರ ಮೂಲಆಶಯದ, ಅರ್ಥವಂತಿಕೆಯ ಅಭಿವ್ಯಕ್ತಿಗೆ ದೊರಕಬೇಕಾದಷ್ಟು ಗಮನ, ಆದ್ಯತೆ, ಪೂರ್ಣಪ್ರಮಾಣದಲ್ಲಿ ಆಗಿಲ್ಲ.

ದಾಸಸಾಹಿತ್ಯದ ಸಂಶೋಧನೆ ಎಂದರೆ ಇದುವರೆಗೂ ಲಭ್ಯವಿರದ, ಆದರೆ ಎಲ್ಲಿಯೋ ಇರಬಹುದಾದ ಲಿಖಿತ ಅಥವಾ ವಾಕ್‌ಪರಂಪರೆಯ ಸಾಹಿತ್ಯದ ಸಂಗ್ರಹವಷ್ಟೇ ಆಗದೆ, ಹಾಗೆ ಸಂಗ್ರಹಿಸಿದ ಹಾಡುಗಳ ಶಾಸ್ತ್ರೀಯ ಪರಿಷ್ಕಾರ, ಹಾಗು ಪ್ರಕಟನೆಯ ಕೆಲಸವೂ ಆಗಿದೆ. ಇದರಲ್ಲಿ ಕ್ಷೇತ್ರಕಾರ್ಯದ ಕೆಲಸ ಬಹಳಷ್ಟು ಆಗಬೇಕಿದೆ. ದೇಶದ ನಾನಾಭಾಗಗಳಲ್ಲಿ ಹರಿದು ಹಂಚಿಹೋಗಿರುವ ಹಸ್ತಪ್ರತಿಗಳ ಸಂಗ್ರಹ, ದಾಸರ ಹಾಡುಗಳ ವಿವಿಧ ಸಂಪ್ರದಾಯಗಳ ಧ್ವನಿಗ್ರಹಣ ಕಾರ್ಯ ಆಗಬೇಕಿದೆ. ಸೂಪಶಾಸ್ತ್ರ, ಆರೋಗ್ಯಶಾಸ್ತ್ರ, ವಿಜ್ಞಾನ, ಪರಿಸರಶಾಸ್ತ್ರ, ಸಮಾಜಶಾಸ್ತ್ರ, ಭೂಗೋಳಶಾಸ್ತ್ರ, ಇತಿಹಾಸ, ಸಂಗಿತಶಾಸ್ತ್ರ, ಮನಃಶಾಸ್ತ್ರ, ತತ್ವಶಾಸ್ತ್ರ, ಯೋಗಶಾಸ್ತ್ರ, ವ್ಯವಹಾರಶಾಸ್ತ್ರ, ಗಣಿತಶಾಸ್ತ್ರ, ಮುಂತಾದವುಗಳೊಡನೆ ದಾಸಸಾಹಿತ್ಯದ ಅಂತರ್ಶಿಸ್ತೀಯ ಅಧ್ಯಯನ ಹಾಗೂ ಬಹುಮುಖೀಯ ಅಧ್ಯಯನವೂ ಈ ಸಂಶೋಧನೆಯ ದಿಕ್ಕಿನಲ್ಲಿ ಆಗಬೇಕಾದ ಕೆಲಸವಾಗಿದೆ.

ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು

ನೀವು ಮಾಡಿ

ತೇಲುವ ಮೊಟ್ಟೆ

ಸಂಕಲನ: ಬದರಿ ತ್ಯಾಮಗೊಂಡ್ಲು

ಇಸ್ರೇಲ್ ಬಳಿ ಇರುವ ಮೃತ ಸಮುದ್ರದ (Dead Sea) ಬಗ್ಗೆ ಕೇಳಿದ್ದೀರಲ್ಲವೇ? ಈ ಸರೋವರದಲ್ಲಿ ನೀವು ಈಜದೇ ತೇಲಬಲ್ಲಿರಿ! ಆಶ್ಚರ್ಯವೇ. ಇದರ ರಹಸ್ಯ ತಿಳಿಯಲು ಈ ಪ್ರಯೋಗ ಮಾಡೋಣ ಬನ್ನಿ.

ಬೇಕಾಗುವ ಸಾಮಾನು:

ಎರಡು ಗಾಜಿನ ಲೋಟಗಳು, ಎರಡು ಮೊಟ್ಟೆಗಳು, ಐದಾರು ಚಮಚ ಅಡುಗೆ ಉಪ್ಪು,

ವಿಧಾನ

ಎರಡು ಲೋಟಕ್ಕೂ ಕುಡಿಯುವ ನೀರನ್ನು ತುಂಬಿ. ಒಂದು ಲೋಟಕ್ಕೆ ಐದಾರು ಚಮಚ ಉಪ್ಪನ್ನು ಹಾಕಿ ಕದಡಿ. ಇರುವ ಎರಡು ಮೊಟ್ಟೆಯನ್ನು ನಿಧಾನವಾಗಿ ಒಂದೊಂದು ಲೋಟಕ್ಕೆ ಹಾಕಿ ಏನಾಗುವುದೆಂದು ಗಮನಿಸಿ.

ಶುದ್ಧ ನೀರಿರಿರುವ ಲೋಟದಲ್ಲಿ ಹಾಕಿದ ಮೊಟ್ಟೆ ತಳ ಸೇರುವುದು. ಉಪ್ಪಿನ ನೀರಿನ ಲೋಟದಲ್ಲಿ ಹಾಕಿದ ಮೊಟ್ಟೆ ತಳ ಸೇರದೆ ತೇಲುವುದು

ರಹಸ್ಯ

ಯಾವುದೇ ವಸ್ತು ಮುಳುಗಬೇಕಾದರೆ ಅದರ ಸಾಂದ್ರತೆ (Density) ಹೆಚ್ಚಿರಬೇಕು. ಮೊಟ್ಟೆಯ ಸಾಂದ್ರತೆ ಶುದ್ಧ ನೀರಿನ ಸಾಂದ್ರತೆಗಿಂತ ಜಾಸ್ತಿ. ಹೀಗಾಗಿ ಮುಳುಗತ್ತದೆ. ಆದರೆ, ನೀರಿಗೆ ಉಪ್ಪು ಬೆರೆಸುತ್ತಾ ಹೋದಂತೆ, ನೀರಿನ ಸಾಂದ್ರತೆ ಮೊಟ್ಟೆಯ ಸಾಂದ್ರತೆಗಿಂತ ಹೆಚ್ಚಾಗುತ್ತಾ ಹೋಗುತ್ತದೆ. ಈ ಕಾರಣದಿಂದ ಉಪ್ಪುನೀರಿನಲ್ಲಿ ಹಾಕಿದ ಮೊಟ್ಟೆ ತೇಲುತ್ತದೆ.

ಜಾಣ ಕರ್ನಾಟಕ – ಉತ್ತರ

೧. ಓರಿಯೆಂಟಲ್ ಲೈಬ್ರರಿ

೨. ಮೈಸೂರು ವಿಶ್ವವಿದ್ಯಾಲಯ (೧೯೧೬), ಮೈಸೂರು ಮೆಡಿಕಲ್ ಕಾಲೇಜ್ (೧೯೨೪)

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಯುಗಾದಿ ಹಬ್ಬ

೦೭ ಏಪ್ರಿಲ್ ೨೦೧೮, ಸಂಜೆ ೫:೩೦

ವ್ಯಾಟೆಲ್ ಗ್ರೂವ್ ಪಬ್ಲಿಕ್ ಸ್ಕೂಲ್, ಕ್ರೆಸ್ ಬ್ರೂಕ್ ಡ್ರೈವ್,

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ

ನಾರಾಯಣ - 0423 634 979,

sugamakannada@gmail.com

ರಂಗೋತ್ಸವ

ಏಪ್ರಿಲ್ ೨೯ ೨೦೧೮

ಬ್ರಯಾನ್ ಬ್ರೌನ್ ಥಿಯೇಟರ್, ಬ್ಯಾಂಕ್ಸ್ ಟೌನ್

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ

ಸುದರ್ಶನ್ - 0414 992 528

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.

ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.